ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,
ಕುಂದಾಪುರ

ಒ.ಎಸ್.ನಂಬ್ರಃ 67/2017
ಪಿ.ಡಬ್ಲ್ಯೂ : 2

ದಿನಾಂಕಃ 24-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎ ಸಿ ಎಚ್. ವಕೀಲರಿಂದಃ

1. ಖಾಸೀಂ ಸಾಹೇಬರಿಗೆ 5 ಜನ ಮಕ್ಕಳು ಇರಬಹುದು. ಅವರುಗಳ ಹೆಸರು ಭಾಷಾ ಸಾಹೇಬ್ ರವರ ಹೆಸರು ಬಿಟ್ಟರೆ ಬೇರೆಯವರು ಹೆಸರು ಗೊತ್ತಿರುವುದಿಲ್ಲ. ನನ್ನ ತಂದೆಯ ಹೆಸರು ಹಸನ್ ಸಾಹೇಬ್, ತಾಯಿ ಹೆಸರು ಕೈರುನ್ನೀಸಾ. ಕೈರುನ್ನೀಸಾರ ತಂದೆಯ ಹೆಸರು ಹಮ್ಮದ್ ಸಾಹೇಬ್. ನನ್ನ ತಂದೆಯ ತಂದೆಯ ಹೆಸರು ಶಾಬು ಸಾಹೇಬ್. ವಾದಿಯವರ ಮನೆಯ ಅಕ್ಕ ಪಕ್ಕ ನಮ್ಮ ಜನಾಂಗದವರು 4 ಮನೆಗಳು ಇವೆ. ಅದರಲ್ಲಿ 2 -3 ಮನೆಯವರು ನಾವು ಸಂಬಂಧಿಕರು ಇರುತ್ತೇವೆ.

2. ವಾದಿಯವರ ಮನೆಯಿಂದ ಪ್ರತಿವಾದಿಯವರ ಮನೆಗೆ 20 ರಿಂದ 25 ಮೀ ಆಗಬಹುದು. ಪ್ರತಿವಾದಿಯವರ ಮನೆಯಲ್ಲಿ ಅವರ ತಾಯಿ ಒಬ್ಬರೇ ಇರುತ್ತಾರೆ. ಪ್ರತಿವಾದಿ ಆಗಾಗ ಬಂದು ಹೋಗುತ್ತಾರೆ. ಪ್ರತಿವಾದಿಯವರ ಮನೆಯಲ್ಲಿ ತಾಯಿ ಮತ್ತು ಆಕೆಯನ್ನು ಬಿಟ್ಟರೆ ಅವರ ಮಗ ಇರುತ್ತಾನೆ. ಮಗನಿಗೆ 30 ವರ್ಷ ಇರಬಹುದು. ಆತ ಪ್ರತಿವಾದಿಯ ತಮ್ಮ. ಖಾಸೀಂ ಸಾಹೇಬ್‌ರು ಖರೀದಿ ಮಾಡಿದ ದಾಖಲೆಯನ್ನು ನಾನು ನೋಡಿರುತ್ತೇನೆ. ಅದು ನೋಂದಾಯಿತ ದಾಖಲೆ. ಅದರ ನೋಂದಾವಣೆ ನಂಬರ್ ನನಗೆ ಹೇಳಲು ಬರುವುದಿಲ್ಲ. 1975 ರಲ್ಲಿ ಕ್ರಯ ಮಾಡಿರುತ್ತಾರೆ. ನೋಂದಾವಣೆ ನಂಬರ್ ಹೇಳಲು ಬರುವುದಿಲ್ಲ.

3. ನಾನು ಆ ದಾಖಲೆಯನ್ನು ಸರಿಯಾಗಿ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನೋಡಿ ಓದಿ ತಿಳಿದುಕೊಂಡು ಹಾಕಿರುತ್ತೇನೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ 1975 ರ ದಾಖಲೆಯ ಬಗ್ಗೆ ಹೇಳಿದ್ದು 1985 ರ ದಾಖಲೆಯ ಬಗ್ಗೆ ಹೇಳಿರುವುದಿಲ್ಲ. 2000 ನೇ ಇಸವಿಯ ವ್ಯವಸ್ಥಾ ಪತ್ರ

ಉಪಾನೋಂದಾಣಾಧಿಕಾರಿಯ ನೋಂದಣಿ ಸಂಖ್ಯೆ ನನಗೆ ಹೇಳಲು ಬರುವುದಿಲ್ಲ. ಸದರಿ ದಾಖಲೆಯ RTC ಮುಟೇಶನ್ ಆಗಿರುತ್ತದೆ ಎಂದು ಹೇಳಿರುತ್ತೇನೆ ಎಂದರೆ ಸರಿ.

4. ಕತಿಬಾ ಬಾಷಾ ಸಾಹೇಬ್ ರವರ ಹೆಸರಿಗೆ RTC ಆಗುವ ಪೂರ್ವದಲ್ಲಿ ಸದರಿ RTC ಖಾಸಿಂ ಸಾಹೇಬರ ಹೆಸರಿಗೆ ಇದ್ದವು. ಕತಿಬಾ ಬಾಷಾ ಸಾಹೇಬ್‌ರವರ ಹೆಸರಿಗೆ RTC ಆಗುವ ಪೂರ್ವದಲ್ಲಿ ಸದರಿ RTC ಗಳು ಪ್ರತಿವಾದಿ ತಂದೆ ಚಂದ್ರಶೇಖರ ಶೆಟ್ಟಿಯವರ ಹೆಸರಿನಲ್ಲಿ ಇದ್ದವು ಎಂದರೆ ಸರಿಯಲ್ಲ. ಹಳ್ನಾಡು ಗ್ರಾಮದ ಸರ್ವೆ ನಂಬರ್ 151/9 ಜಮೀನಿಗೆ ಸಂಬಂಧಪಟ್ಟಂತೆ ಮಾತ್ರ ಪ್ರತಿವಾದಿ ತಕರಾರು ತೆಗೆದಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿನಾಂಕ 10-01-2017 ರಂದು ನಮ್ಮ ಗದ್ದೆಯ ಬಳಿ ಕೆಲಸ ಮಾಡುತ್ತಿದ್ದೆ. ನಮ್ಮ ಗದ್ದೆ ಅವರ ಗದ್ದೆಯ ಪಕ್ಕದಲ್ಲಿ ಸ್ವಲ್ಪ ದೂರದಲ್ಲಿ ಇರುತ್ತದೆ. ಆ ದೂರ 20 ಮೀ ಇರಬಹುದು.

5. ಸರ್ವೆ ನಂಬರ್ 151/9 ರ ಪುಲ್ ಪ್ಲೋಟ್ ನಲ್ಲಿ ಗಡಿ ಗುರುತು ಆದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಹಳ್ನಾಡು ಗ್ರಾಮದ ಸರ್ವೆ ನಂಬರ್ 151/9 ರ ಸ್ಥಳ ಯಾವುದು ಎಂದು ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಯವರು ವಾದಿಯವರ ಜಾಗಕ್ಕೆ ಅತಿಕ್ರಮವಾಗಿ ಬಂದ ಬಗ್ಗೆ ಹೇಳಲು ಸಾಧ್ಯ ಇರುವುದಿಲ್ಲ ಎಂದರೆ ಸಾಕ್ಷಿ ನಾನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದಿ ಸ್ಥಳವಾದ 36 ಸೆಂಟ್ಸ್ ಸರ್ವೆ ನಂಬರ್ 151/9 ರ ಯಾವ ಭಾಗದಲ್ಲಿ ಬರುತ್ತದೆ ಎಂದು ಗೊತ್ತಿರುವುದಿಲ್ಲ. 36 ಸೆಂಟ್ಸ್ ಜಾಗದಲ್ಲಿ ಎಷ್ಟು ಮರಗಳು ಬರುತ್ತದೆ ಎಂದು ಗೊತ್ತಿರುವುದಿಲ್ಲ.

6. ಪ್ರತಿವಾದಿಯವರು ವಾದಿಯವರ ಜಮೀನಿನಲ್ಲಿ ರೂ. 30 ಸಾವಿರ ನಷ್ಟ ಹಾನಿ ಮಾಡಿರುತ್ತಾರೆ ಎಂದು ಹೇಳಿದ್ದು ಆ ಲೆಕ್ಕಚಾರ ಹಾಕಿದ್ದು ನಾನೇ. ವಾದಿಯವರು ಈ ಬಗ್ಗೆ ನನಗೆ ಹೇಳಿರುವುದಿಲ್ಲ. ವಾದಿಯವರು ಪ್ರತಿವಾದಿಯ ವಿರುದ್ಧ ದಿನಾಂಕ 10-01-2017 ರಂದು ದೂರು ದಾಖಲಿಸಿರುತ್ತಾರೆ. 3 ಗಂಟೆಗೆ ದೂರು ದಾಖಲಿಸಿರುತ್ತಾರೆ. ದೂರನ್ನು ವಾದಿಯು ಹಾಜರು ಪಡಿಸಿರಬಹುದು. ಪ್ರತಿವಾದಿಯವರು ಆ ರೀತಿಯ ಯಾವುದೇ ಕೃತ್ಯ ಮಾಡದೇ ಇದ್ದರೂ ಸಹ ಅವರ ಮೇಲಿನ ದ್ವೇಷದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ಠಾಣೆಗೆ ಸಲ್ಲಿಸಿದ ದೂರು FIR ಆದ ಬಗ್ಗೆ ಗೊತ್ತಿದೆಯಾ ಎಂದರೆ ಸಾಕ್ಷಿ ರಾಜಕೀಯ ಪ್ರಭಾವ ಬೀರಿ FIR ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಠಾಣಾಧಿಕಾರಿಯವರು

ರಾಜಕೀಯ ಪ್ರಭಾವದಿಂದ ಆ ದೂರನ್ನು ದಾಖಲಿಸಿಕೊಂಡಿರುವುದಿಲ್ಲ. ಆ ಬಗ್ಗೆ ಠಾಣಾಧಿಕಾರಿಯವರ ವಿರುದ್ದ ಅವರ ಹಿರಿಯ ಅದಿಕಾರಿಗೆ ವಾದಿ ದೂರು ಸಲ್ಲಿಸಿದ್ದಾರಾ ಎಂದರೆ ಸಾಕ್ಷಿ ನ್ಯಾಯಲಯದಲ್ಲಿ ದೂರು ದಾಖಲಿಸಿರುತ್ತಾರೆ ಎಂದು ನುಡಿಯುತ್ತಾರೆ.

8. ಪ್ರತಿವಾದಿ ಮೇಲೆ ನಾನು ಅಹಲ್ಲೆ ಮಾಡಲು ಹೋದಾಗ ಅವರು ನನ್ನ ವಿರುದ್ದ ದೂರು ಸಲ್ಲಿಸಿದ್ದು ಆ ಕಾರಣದಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಒಂಟಿಸ್ತ್ರೀ ಆಗಿದ್ದರಿಂದ ಅವರ ಮೇಲೆ ಕೆಟ್ಟ ದಷ್ಟಿ ಹಾಕಿರುತ್ತೇನೆ ಎಂದು ದೂರು ಕೊಡಲು ಹೋಗಿರುತ್ತಾರೆ ಎಂದರೆ ಸಾಕ್ಷಿ ನಾನು ಕೆಟ್ಟ ದೃಷ್ಟಿ ಹಾಕಿರುವುದಿಲ್ಲ ಎಂದು ನುಡಿಯುತ್ತಾರೆ. ಆ ಕಾರಣದಿಂದ ನಾನು ಪ್ರತಿವಾದಿಯ ವಿರುದ್ದ ಸುಳ್ಳು ಸಾಕ್ಷಿ ಹೇಳಲು ಬಂದಿರುತ್ತೇನೆ ಎಂದರೆ ಸರಿಯಲ್ಲ. ಠಾಣಾಧಿಕಾರಿಯವರು ಈ ಬಗ್ಗೆ ಇಬ್ಬರನ್ನು ವಿಚಾರಿಸಿ ನ್ಯಾಯಲಯದಲ್ಲಿ ಬಗೆಹರಿಸಿಕೊಳ್ಳಿ ಎಂದು ಹೇಳಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ